ರಾಜ್ಯದಲ್ಲಿ ಶಾಲೆಬಿಟ್ಟ ಮಕ್ಕಳ ವಿವರ

176(340) ಶ್ರೀ ಸುನೀಲ್ ಕುಮಾರ್ ವಿ. (ಕಾರ್ಕಳ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಶಾಲೆ ಬಿಟ್ಟ ಮಕ್ಕಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಶಾಲೆ ಬಿಟ್ಟ ಮಕ್ಕಳನ್ನು ಗುರುತಿಸಲು ಅನುಸರಿಸುತ್ತಿರುವ ಮಾನದಂಡಗಳೇನು; ಈ ಕುರಿತ ಸಮೀಕ್ಷೆ ನಡೆಸಿರುವ ಸಂಸ್ಥೆ/ವ್ಯಕ್ತಿ ಯಾರು; ಸಮೀಕ್ಷೆ ಯಾವಾಗ ನಡೆಸಲಾಗಿರುತ್ತದೆ ;

(ಇ) ಸಮೀಕ್ಷೆ ಪ್ರಕಾರ ಮಕ್ಕಳು ಶಾಲೆಯನ್ನು ಬಿಡಲು ಕಾರಣವೇನು ? ಸಮೀಕ್ಷೆಯ ಪ್ರಮುಖ ಶಿಫಾರಸ್ಸುಗಳೇನು ;

(ಈ) ಶಾಲೆ ಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ಸೇರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

(ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಖಾಲಿ ಬಿಟ್ಟ ಮಕ್ಕಳ ಸಂಖ್ಯೆ ಈ ಕೆಳಕಂಡಂತಿದೆ.

2012–13	2013–14	2014–15
51994	22741	168621

ಜಿಲ್ಲಾವಾರು ಮತ್ತು ವರ್ಷವಾರು ಮಾಹಿತಿಯನ್ನು ಅನುಬಂಧ 1ರಲ್ಲಿ ಲಗತ್ತಿಸಿದೆ.

(ಆ) ಶಾಲೆ ಬಿಟ್ಟ ಮಕ್ಕಳನ್ನು ಗುರುತಿಸಲು 2013–14 ನೇ ಸಾಲಿನಲ್ಲಿ ಸಮೀಕ್ಷೆಯನ್ನು ನಡೆಸಲಾಗಿದೆ. ಈ ಸಮೀಕ್ಷೆಯನ್ನು ಶಾಲಾ ಸಮೀಕ್ಷೆ ಮತ್ತು ಕುಟುಂಬ ಸಮೀಕ್ಷೆಯ ಎರಡು ಹಂತಗಳಲ್ಲಿ ನಡೆಸಲಾಗಿದೆ.

ಸಮೀಕ್ಷೆ ಕಾರ್ಯಕ್ಕೆ ಯಾವುದೇ ಕ್ಲಸ್ಟರ್‌ನಲ್ಲಿ 50ಕ್ಕಿಂತ ಹೆಚ್ಚು /ಶಾಲೆಬಿಟ್ಟ ಮಕ್ಕಳಿದ್ದಾರೆ. ಅಂತಹ ಕ್ಲಸ್ಟರ್‌ಗಳನ್ನು ವಲ್ನರಬಲ್ ಕ್ಲಸ್ಟರ್‌ಗಳೆಂದು, 50ಕ್ಕಿಂತ ಕಡಿಮೆ ಶಾಲೆಬಿಟ್ಟ ಮಕ್ಕಳಿದ್ದಲ್ಲಿ ಅದನ್ನು ನಾನ್ – ವಲ್ನರಬಲ್ ಕ್ಲಸ್ಟರ್‌ಗಳೆಂದು ಗುರುತಿಸಲಾಗಿತ್ತು. ನಗರ ವ್ಯಾಪ್ತಿಯ ಎಲ್ಲ ಕ್ಲಸ್ಟರ್‌ಗಳನ್ನು ವಲ್ನರಬಲ್ ಎಂದು ಗ್ರಾಮಾಂತರ ಕ್ಲಸ್ಟರ್‌ಗಳನ್ನು ವಲ್ನರಬಲ್ ಮತ್ತು ನಾನ್–ವಲ್ನರಬಲ್ ಕ್ಲಸ್ಟರ್ ಗಳೆಂದು ವಿಂಗಡಿಸಿ ಸಮೀಕ್ಷೆ ಕಾರ್ಯವನ್ನು ನಡೆಸಲಾಯಿತು.

ಸಮೀಕ್ಷೆ ಕಾರ್ಯವನ್ನು ಶಿಕ್ಷಣ ಇಲಾಖೆಯು ಇತರೆ ಇಲಾಖೆಗಳಾದ ಕಾರ್ಮಿಕ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕಂದಾಯ ಇಲಾಖೆ, ಜಿಲ್ಲಾ ಪಂಚಾಯತ್ ಹಾಗೂ ಎನ್.ಜಿ.ಓ.ಗಳ ಸಹಯೋಗದೊಂದಿಗೆ ನಡೆಸಲಾಗಿದೆ.

ಒಂದು ತಂಡದಲ್ಲಿ ಇಬ್ಬರು ಶಿಕ್ಷಕರು, ಒಬ್ಬರು ಇತರೆ ಇಲಾಖೆ ಪ್ರತಿನಿಧಿ ಮತ್ತು ಒಬ್ಬರು ಎನ್.ಜಿ.ಓ.ಗಳು ಇರುವಂತೆ ಒಟ್ಟು 39773 ತಂಡವನ್ನು ರಚಿಸಿ ಪ್ರತಿ ಶಾಲೆ ಹಾಗೂ ಕುಟುಂಬ ಸಮೀಕ್ಷೆ ನಡೆಸಿದೆ.

ಈ ಸಮೀಕ್ಷೆಯನ್ನು ಶಾಲಾ ಹಂತದಲ್ಲಿ ದಿನಾಂಕ: 6.11.2013 ರಿಂದ 7.11.2013 ಹಾಗೂ ಕುಟುಂಬ ಸಮೀಕ್ಷೆಯನ್ನು ದಿನಾಂಕ: 13.11.2013 ರಿಂದ 17.11.2013 ರವರೆಗೂ ನಡೆಸಲಾಗಿದೆ.

ಇ) ಸಮೀಕ್ಷೆ ಮಾಹಿತಿಯನ್ವಯ ಮಕ್ಕಳು ಶಾಲೆಯನ್ನು ಬಿಡಲು ಈ ಕೆಳಕಂಡ ಕಾಲೇಜುಗಳನ್ನು ಗುರುತಿಸಲಾಗಿದೆ.

- ✓ ಶಾಲೆ/ದೂರವಿರುವುದು (School at far distance)
- ✓ ಸ್ವಂತ ಮನೆಗೆಲಸ (House hold work)
- ✓ ಬೇರೆಯವರ ಮನೆಗೆಲಸ (Work in other house hold)
- ✓ ಇತರೆ ದುಡಿಮೆ ಕೆಲಸದಲ್ಲಿ ತೊಡಗಿರುವುದು (Engaged other earning)
- ✓ ಮದುವೆಯಾಗಿರುವುದು (Married)
- ✓ ಮಗು ಹೆಣ್ಣಾಗಿದ್ದು, ದೊಡ್ಡವಳಾಗಿರುವುದು (Puberty)
- ✓ ಹೆಣ್ಣುಮಕ್ಕಳಿಗೆ ಸಂಬಂಧಿಸಿದ ಇತರೆ ಕಾರಣ (Other Reasons related to girl child)
- ✓ ಶಾಲಾ ಪರಿಸರ ಆಕರ್ಷಣೀಯವಾಗಿಲ್ಲದಿರುವುದು (Unattractive school environment)
- ✓ ಅಲೆಮಾರಿ/ವಲಸೆ ಜೀವನ (Migration)
- ✓ ಶಿಕ್ಷಕರ ಭಯ (Teachers fears)
- ✓ ಓಡಿ ಹೋದ ಮಗು (Run away child)
- ✓ ಬೀದಿ ಮಗು/ಚಿಂದಿ ಆಯುವ ಮಗು
- ✓ (Street/Rag Picking Child)
- ✓ ತೀವ್ರ ಅಂಗವಿಕಲತೆ (Severe physical disability)
- ✓ ಮರಣ ಹೊಂದಿರುವುದು (Death)

✓ ಇತರೆ ಕಾರಣ (other Reasons)

ಸಮೀಕ್ಷೆಯಲ್ಲಿ ಗುರುತಿಸಲಾದ ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರಲು ಈ ಕೆಳಕಂಡ ಶಿಫಾರಸುಗಳನ್ನು ನೀಡಿದೆ.ಭೌಗೋಳಿಕ ಪ್ರದೇಶದ ಹಿನ್ನೆಲೆಯನ್ನು ಆಧರಿಸಿ ಜಿಲ್ಲಾ ಮತ್ತು ಬ್ಲಾಕ್ ಹಂತದಲ್ಲಿ ಸ್ಥಳೀಯ ಅಗತ್ಯತೆಗೆ ತಕ್ಕಂತೆ ಕ್ರಿಯಾ ಯೋಜನೆಯನ್ನು ರೂಪಿಸುವುದು.

ಶಾಲೆ ಬಿಡಲು ಪ್ರಮುಖ ಕಾರಣಗಳನ್ನು ಗುರುತಿಸಿ ಕಾರಣಕ್ಕೆ ಸರಿಹೊಂದುವಂತೆ ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರಲು ವಿವಿಧ ಮಧ್ಯವರ್ತನೆಗಳನ್ನು ಅನುಷ್ಠಾನಗೊಳಿಸುವುದು.

ಶಿಕ್ಷಣ ಇಲಾಖೆ ಹಾಗೂ ಇತರೆ ಇಲಾಖೆಗಳಿಂದ ನೀಡಲಾಗುವ ಸೌಲಭ್ಯಗಳನ್ನು ಈ ಮಕ್ಕಳಿಗೆ ಸಕಾಲದಲ್ಲಿ ಒದಗಿಸಲು ಸೂಕ್ತ ಕ್ರಮ ಕೈಗೊಳ್ಳುವುದು.
ಈ) ಶಾಲೆ ಬಿಟ್ಟ ಮಕ್ಕಳನ್ನು ಶಿಕ್ಷಣದ ಮುಖ್ಯವಾಹಿನಿಗೆ ತರಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

✓ ಮೂರು ತಿಂಗಳ ವಸತಿ ರಹಿತ ಮತ್ತು ವಸತಿ ಸಹಿತ ವಿಶೇಷ ತರಬೇತಿ
✓ 6 ತಿಂಗಳ ಋತುಮಾನ ವಸತಿಯುತ ವಿಶೇಷ ತರಬೇತಿ
✓ ಶಾಲಾಧಾರಿತ ವಿಶೇಷ ತರಬೇತಿ
✓ ಟೆಂಟ್ ಶಾಲೆಗಳು (ವಲಸೆ ಮಕ್ಕಳಿಗಾಗಿ)
✓ ಎನ್.ಸಿ.ಎಲ್.ಪಿ. ಶಾಲೆಗಳು (ಬಾಲಕಾರ್ಮಿಕ ಮಕ್ಕಳಿಗಾಗಿ)
✓ ಯು.ಡಿ.ಸಿ. (ನಗರದಲ್ಲಿ ಶಿಕ್ಷಣ ವಂಚಿತ ಮಕ್ಕಳಿಗಾಗಿ)
✓ ಮದರಸ ಕೇಂದ್ರಗಳು
✓ ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕ್‌ಗಳಲ್ಲಿ ಹೆಣ್ಣು ಮಕ್ಕಳಿಗಾಗಿ ಒಟ್ಟು 71 ಕೆ.ಜಿ.ಬಿ.ವಿ, 68 ಕೆಕೆಜಿಬಿವಿ ಶಾಲೆಗಳು.
✓ ಅದಲ್ಲದೆ, ಶಾಲೆ ಬಿಟ್ಟ ಹೆಣ್ಣು ಮಕ್ಕಳಿಗೆ ಪ್ರಥಮ ಆದ್ಯತೆ ನೀಡಿ ಸದರಿ ಶಾಲೆಗೆ ದಾಖಲಿಸಿ ಶಿಕ್ಷಣ ನೀಡಲಾಗುತ್ತಿದೆ. ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿರುವ ಮಕ್ಕಳಿಗೆ ಬಿ.ಸಿ.ಎಂ., ಎಸ್.ಸಿ/ಎಸ್‌ಟಿ. ಅಲ್ಪಸಂಖ್ಯಾತ ವಸತಿ ನಿಲಯಗಳಲ್ಲಿ ಅವಕಾಶ ಹಾಗೂ ಸರ್ಕಾರ ನೀಡುತ್ತಿರುವ ಎಲ್ಲಾ ಸವಲತ್ತುಗಳನ್ನು (ಉಚಿತ ಸಮವಸ್ತ್ರ, ಪಠ್ಯ ಪುಸ್ತಕ, ಸೈಕಲ್, ಸ್ಕೂಲ್ ಬ್ಯಾಗ್, ಮಧ್ಯಾಹ್ನದ ಬಿಸಿಯೂಟ, ಕ್ಷೀರಾ ಯೋಜನೆ, ಇತ್ಯಾದಿ) ನೀಡಲಾಗುತ್ತದೆ.
✓ ಆರ್.ಟಿ.ಇ. 2009 ರಡಿ 5 ವಿಶೇಷ ವಸತಿ ಶಾಲೆಗಳು.

ಅನುಬಂಧ – 1

ಕ್ರ. ಸಂ.	ಜಿಲ್ಲೆ ಹೆಸರು	ಕಳೆದ 3 ವರ್ಷಗಳಿಂದ ರಾಜ್ಯದಲ್ಲಿ ಶಾಲೆ ಬಿಟ್ಟಿ ಮಕ್ಕಳ ಸಂಖ್ಯೆ		
		2012–13	2013–14	2014–15
1	ಬಾಗಲಕೋಟೆ	815	160	6155
2	ಬೆಂಗಳೂರು ಗ್ರಾ.	343	103	1775
3	ರಾಮನಗರ	355	104	1391
4	ಬೆಂಗಳೂರು ಉತ್ತರ	3500	1838	7726
5	ಬೆಂಗಳೂರು ದಕ್ಷಿಣ	5274	2158	18322
6	ಬೆಳಗಾವಿ	1162	361	4410
7	ಚಿಕ್ಕೋಡಿ	2059	597	5484
8	ಬಳ್ಳಾರಿ	2968	675	10675
9	ಬೀದರ್	2609	1879	5272
10	ಬಿಜಾಪುರ	1962	460	9690
11	ಚಾಮರಾಜನಗರ	1382	858	2195
12	ಚಿಕ್ಕಮಗಳೂರು	387	402	2226
13	ಚಿತ್ರದುರ್ಗ	778	582	4147
14	ದಕ್ಷಿಣ ಕನ್ನಡ	137	132	1470
15	ದಾವಣಗೆರೆ	1115	913	4600
16	ಧಾರವಾಡ	1520	414	3157
17	ಗದಗ	2217	1304	3215
18	ಗುಲ್ಬರ್ಗ	3440	1577	15367
19	ಯಾದಗಿರಿ	2748	2140	11142
20	ಹಾಸನ್	258	172	1751
21	ಹಾವೇರಿ	1625	470	4623
22	ಕೊಡಗು	226	68	1535
23	ಕೋಲಾರ	758	370	3404
24	ಚಿಕ್ಕಬಳ್ಳಾಪುರ	593	432	2244
25	ಕೊಪ್ಪಳ	4663	1963	7290
26	ಮಂಡ್ಯ	376	98	2151
27	ಮೈಸೂರು	2506	931	5921
28	ರಾಯಚೂರು	3467	741	12033
29	ಶಿವಮೊಗ್ಗ	755	398	3100
30	ತುಮಕೂರು	1155	125	2228
31	ಮಧುಗಿರಿ	445	93	1209
32	ಉಡುಪಿ	86	123	997
33	ಉತ್ತರ ಕನ್ನಡ	310	44	678
34	ಶಿರಸಿ		56	1038
	ಒಟ್ಟು	51994	22741	168621